
## ಆಕಳಿಸಿ ಆಕಳಿಸಿ ಬೀಳದಿರು ಗೆಳತಿ

'ಆಕಳಿಸಿ ಆಕಳಿಸಿ ಬೀಳದಿರು ಗೆಳತಿ' (ಮಾ. 17) ಸುಮಾ ರಮೇಶ್ ಅವರ ನಗೆಲೇಖನ ಆಸ್ವಾದನೀಯವಾಗಿತ್ತು. ಆಕಳಿಕೆಗೆ ವೈಜ್ಞಾನಿಕ ಕಾರಣಗಳನ್ನು ಕೊಡುವುದರ ಜೊತೆ ನಗೆಲೇಪನ ನೀಡಿರುವುದು ನಿಜಕ್ಕೂ ಮಂದಹಾಸ ಮೂಡಿಸಿತು. ಗಗನಸಖಿಯರಿಗೆ 'ಆಕಾಶ ಸುಂದರಿಯರು' ಎಂಬ ಇನ್ನೊಂದು ಹೆಸರನ್ನು ಉಲ್ಲೇಖಿಸಿರುವುದು ಸೊಗಸಾಗಿದೆ. ಆಕಳಿಕೆ ನಮ್ಮನ್ನು ನಿಜವಾಗಲೂ ರಿಲ್ಯಾಕ್ಸ್ ಮೂಡಿಗೆ ಕೊಂಡೊಯ್ಯುತ್ತದೆ. ಆದ್ರೆ ಸ್ವಚ್ಛಂದವಾಗಿ ಆಕಳಿಸಲು ಮಾಸ್ಕ್ ಅಡ್ಡಿಯಾಗುತ್ತದೆ!




—ಟಿ. ಎಸ್. ಪ್ರತಿಭಾ, ಚಿತ್ರದುರ್ಗ

ಈ ಲೇಖನ ಓದುತ್ತಾ ಓದುತ್ತಾ ಹದಿನೈದು ಸಲ ಆಕಳಿಸಿದ್ದೇನೆ. ಪ್ರಾಯೋಗಿಕವಾಗಿ ಇದು ಸಾಂಕ್ರಾಮಿಕ ಎಂದು ಮನದಟ್ಟು ಆಯಿತು. ನಿಮಗೆ ಪ್ರತಿಕ್ರಿಯಿಸುವಷ್ಟರಲ್ಲಿ ಹತ್ತಕ್ಕಿಂತ ಹೆಚ್ಚು ಬಾರಿ ಆಕಳಿಸಿದೆ. ವಿಚಿತ್ರವಾದರೂ ಸತ್ಯ.

—ನಿರ್ಮಲಾ ಮರಡಿಹಳ್ಳಿ

ಆಕಳಿಕೆ ಓದುತ್ತಾ ಹೋದಾಗ ನನಗೇ ಗೊತ್ತಿಲ್ಲದೆ ಆಕಳಿಕೆ ಬರಲು ಶುರುವಾಯಿತು. ಚೆನ್ನಾಗಿದೆ.

—ಪುಷ್ಪಾ ರಮೇಶ್

ಲೇಖನ ಸಾಕಷ್ಟು ಮನರಂಜನೆಯೊಂದಿಗೆ ಆಕಳಿಕೆಯ ಬಗ್ಗೆ ಸಾಕಷ್ಟು ರಚನಾತ್ಮಕ ಮಾಹಿತಿಯನ್ನು ನೀಡುವಲ್ಲಿ ಸಫಲವಾಗಿದೆ. ಓದಿ ತುಂಬ ಖುಷಿಯಾಯಿತು.

—ರಾಕೇಶ್ ಗೋಕಾವಿ

## ಎಲ್ಲೆಗಳ ಮೀರಿದ ಎಲ್ಲೋರಾ

'ಎಲ್ಲೆಗಳ ಮೀರಿದ ಎಲ್ಲೋರಾ' (ಸುಚಿತ್ರಾ ಹೆಗಡೆ, ಮಾ.17) ಕಥನ ಸಮಗ್ರ ಮಾಹಿತಿಯೊಂದಿಗೆ ಪ್ರವಾಸ ಮಾಡಿದ ಅನುಭವವನ್ನೇ ಓದಿಗೂ ದಕ್ಕಿಸಿತು. ಸುಚಿತ್ರಾ ಹೆಗಡೆಯವರ ಸಮರ್ಥ ನಿರೂಪಣೆ ಎಲ್ಲೋರಾಗೆ ಈಗಲೇ ಹಾರಿ ಹೋಗುವಂತೆ ಮಾಡಿತು. 'ನಿಮ್ಮ ಪುಟ' ದಲ್ಲಿ ವರದಿಯಾಗಿರುವಂತೆ, ಪುತ್ತೂರಿನ 'ಪುಸ್ತಕ ಗೂಡು' ರಾಜ್ಯದ ಮೂಲೆ ಮೂಲೆಯಲ್ಲೂ ತಲೆ ಎತ್ತಲಿ.

—ವಸುಂಧರಾ ಕದಲೂರು

ತುಂಬ ಮಹತ್ವಪೂರ್ಣವಾದ ನಮ್ಮ ದೇಶದ ಹೆಮ್ಮೆಯ ಎಲ್ಲೋರಾ ತಾಣದ ಬಗ್ಗೆ ವಿವರಿಸಿದ ಸುಚಿತ್ರಾ ಹೆಗಡೆಯವರಿಗೆ ವಂದನೆಗಳು.

—ಸುಜಾತ ಯಲಹಂಕ, ಬೆಂಗಳೂರು

## ಫ್ಯಾಷನ್ ಫ್ಯೂಷನ್

'ಫ್ಯಾಷನ್ ಫ್ಯೂಷನ್' (ಸುಮನಾ ಜಿ. ಪ್ರಸಾದ್, ಮಾ. 17)ರ ಲೇಖನ ಚೆನ್ನಾಗಿತ್ತು.ಕೊರೊನಾ ಕಾಲದಲ್ಲಿ ಹೊರಬಂದ ಅನೇಕಾನೇಕ ಆಕರ್ಷಕ ಪ್ರಯೋಗಗಳ ಫ್ಯೂಷನ್ ಅವತರಣಿಕೆಯ ಅಂದವನ್ನು ತೆರೆದಿಟ್ಟಿದೆ. ಇತ್ತೀಚೆಗೆ ಮದುಮಗಳ ಬ್ರೈಡಲ್ ಅಲಂಕಾರದಲ್ಲಿ ಆರತಕ್ಷತೆಗೆ ಬೈತಲೆ ಬೊಟ್ಟಿನಿಂದ ಹಿಡಿದು ಅಲಂಕಾರಿಕ, ಫಳಫಳ ಹೊಳೆಯುವ ಚಿಕ್ಕ ಚಿಕ್ಕ ಬಲ್ಬ್‌ಗಳನ್ನೊಳಗೊಂಡ ಮ್ಯಾಚಿಂಗ್ ಪಾದರಕ್ಷೆಗಳೂ ಸೇರ್ಪಡೆಯಾಗಿರುವುದು ಗಮನಾರ್ಹ.

—ನಿರುಕ್ತಾ

## ನಮ್ಮಲ್ಲಿ ಒಬ್ಬರು!

'ನಮ್ಮಲ್ಲಿ ಒಬ್ಬರು!' (ಪ್ರವೀಣ ಕುಲಕರ್ಣಿ, ಮಾ. 17) ಲೇಖನ ಚೆನ್ನಾಗಿತ್ತು. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಬಗ್ಗೆ ಪೂರಾ ಮಾಹಿತಿ ಕೊಟ್ಟಿದ್ದಾರೆ. ಅವರ ಬಗ್ಗೆ ಗೊತ್ತಿಲ್ಲದವರು ಓದುವುದು ಸೂಕ್ತ. ನಮ್ಮ ದೇಶದ ಎಲ್ಲಾ ಜನಾಂಗಗಳಿಗೆ ಸಮಾನ ಅವಕಾಶ ಸಿಗಬೇಕು ಎನ್ನುವ ಅವರ ಮಾತು ಮೆಚ್ಚುವಂತದ್ದೇ.

—ಲಕ್ಷ್ಮಣ್ ರಾವ್ ಎಂ. ಎಲ್., ದಾವಣಗೆರೆ

## ವೈದ್ಯಕೀಯ ಶಿಕ್ಷಣಕ್ಕೆ ಅನಾರೋಗ್ಯ

'ವೈದ್ಯಕೀಯ ಶಿಕ್ಷಣಕ್ಕೆ ಅನಾರೋಗ್ಯ' (ಎನ್. ಉದಯಕುಮಾರ್, ಮಾ. 17) ಲೇಖನ ಚೆನ್ನಾಗಿ ಮೂಡಿಬಂದಿದೆ. ಈಗ ವೈದ್ಯರು ಸ್ವಾರ್ಥಿಗಳಾಗಿದ್ದಾರೆ. ಹಣಕ್ಕಾಗಿ ಕೆಲಸ ಮಾಡುತ್ತಾರೆ. ಎಲ್ಲರೂ ಹಣ ಗಳಿಸುವುದು ಮಾತ್ರ ಕಲಿತಿದ್ದಾರೆ. ಹೀಗಾದರೆ ಬಡ ರೋಗಿಗಳ ಗತಿಯೇನು? ಅವರ ಆರೋಗ್ಯ ಸಮಾಜದ ಜವಾಬ್ದಾರಿಯಲ್ಲವೇ? ವೈದ್ಯರು ಇನ್ನಾದರೂ ಬಡವರ ಆಧಾರವಾಗಲಿ ಎಂಬ ಲೇಖನದ ಆಶಯ ಇಷ್ಟವಾಯ್ತು.

—ಬಿ. ಎಸ್. ಮುಳ್ಳೂರ, ಹಲಗತ್ತಿ

## ನನ್ನನ್ನು ಮರೆತುಬಿಡಿ

'ನನ್ನನ್ನು ಮರೆತುಬಿಡಿ' (ಭಾಗ್ಯ ಕೃಷ್ಣಮೂರ್ತಿ, ಮಾ. 17) ಕಥೆ ಚೆನ್ನಾಗಿತ್ತು. ಕಥಾನಾಯಕಿಯ ಮಾನಸಿಕ ತುಮುಲಗಳ ವಿಶ್ಲೇಷಣೆ ಇಷ್ಟವಾಯ್ತು. ಬರವಣಿಗೆಯ ತಂತ್ರವೂ ಗಮನಾರ್ಹವಾಗಿದೆ.

—ಆರ್.ಕೆ. ಮಿಜಾರ್, ಮೂಡಬಿದ್ರೆ



## ಕೆ-ಪಾಪ್ ಗುಂಗು

'ಕೆ–ಪಾಪ್ ಗುಂಗು' (ವಿಶಾಖ ಎನ್., ಮಾ. 17) ಲೇಖನ ಗಾನದ ಗುಂಗಿಗೆ ಕರೆದೊಯ್ಯುತ್ತದೆ. ಈಗಿನ ಯುವಜನತೆ, ಮಕ್ಕಳೂ ಸೇರಿ ಅದರ ರಸಾನುಭವ ಪಡೆಯುತ್ತಿರುವುದು ನಮ್ಮ ಮನೆಯಲ್ಲೇ ನೋಡುತ್ತಿದ್ದೇನೆ. ಅರವತ್ತು ಎಪ್ಪತ್ತರ ದಶಕದಲ್ಲಿ ಕ್ಯಾಸೆಟ್ ಯುಗದಲ್ಲಿ ಪಾಪ್ ಸಾಕಷ್ಟು ಜನಪ್ರಿಯತೆ ಗಳಿಸಿತ್ತು. ABBA, Boney M ಆಗಿನ ಜನಪ್ರಿಯ ಬ್ಯಾಂಡ್‌ಗಳಾಗಿದ್ದವು.

—ಕೆ.ಎಸ್. ಸೋಮೇಶ್ವರ,ಬೆಂಗಳೂರು

ಮುಖಪುಟ ಲೇಖನ ಯುವಜನಾಂಗದ ಸಂಗೀತ ಸಾಂಗತ್ಯದ ಅಭಿರುಚಿಗಳನ್ನು ತೆರೆದಿಟ್ಟಿದೆ. ಪರದೇಶದ ಸಂಗೀತ ಪ್ರಭೇದಗಳು ಸೋಷಿಯಲ್ ಮೀಡಿಯಾ ಪ್ರವಾಹದಲ್ಲಿ ಬಾಹುಳ್ಯ ಪಡೆದು ಯುವ ಜನಾಂಗದ ಮನಸ್ಸಿನಾಳದಲ್ಲಿ ಭದ್ರ ಸ್ಥಾನ ಪಡೆಯುತ್ತಿವೆ. ಈ ಸಂಗೀತಗಳಲ್ಲಿ ದೇಸಿ ಮಣ್ಣಿನ ಘಮಲು ಇರದಿದ್ದರೂ ಯುವ ಮನಸುಗಳಿಗೆ ಅಮಲು ಹತ್ತಿಸುವಷ್ಟು ಪ್ರಭಾವಶಾಲಿ ಎನ್ನುವುದಂತೂ ದಿಟ!

—ಎಚ್. ಸಿದ್ದಾರ್ಥ, ಕಾರ್ಕಳ

ನನಗೆ ಮೊದಲು ಕೆ–ಪಾಪ್‌ನ ಪರಿಚಯ ಆಗಿದ್ದು ಯುನಿಸೆಫ್ ಮತ್ತು ಬಿಟಿಎಸ್‌ನ ಸಹಯೋಗದಲ್ಲಿ ಬಂದ 'ಲವ್ ಯುವರ್‌ಸೆಲ್ಫ್' ಚಳವಳಿ ಮೂಲಕ. ನನ್ನ ಮಟ್ಟಿಗೆ ಅವರು ಬರಿಯ ಚಂದ ಹಾಡುಗಳನ್ನ ಕಟ್ಟಿಕೊಟ್ಟ ಒಂದು ಸಾಮಾನ್ಯ ಬ್ಯಾಂಡ್ ಅಲ್ಲ. ಜೀವನದಲ್ಲಿ ನನ್ನ ಅಭಿಪ್ರಾಯ, ಆಸೆಗಳು ಮುಖ್ಯ, ಒಬ್ಬ ಮನುಷ್ಯ ತನ್ನನ್ನ ತಾನು ಪ್ರೀತಿಸಬೇಕು, ಆಗಲೇ ಜಗತ್ತನ್ನು ಪ್ರೀತಿಸೋಕೆ ಆಗುವುದು ಅನ್ನೋದನ್ನು ಅರ್ಥ ಮಾಡಿಸಿದ ಜೊತೆಗಾರರು ಅಂತ ಹೇಳಬಹುದು. ಪ್ರೌಢಿಮೆ ಹಾಗೂ ಮೆರುಗು ಎರಡನ್ನೂ ಹೊಂದಿ ಎರಡೂ ಜಗತ್ತನ್ನ ತನ್ನ ಮಡಿಲಲ್ಲಿ ಹಾಕಿಕೊಂಡು ಕೆ–ಪಾಪ್ ಮಂದಿ ತೂಗುತ್ತ ಇದ್ದಾರೆ. ಕೆ–ಪಾಪ್ ಗುಂಗು ಲೇಖನ ಚೆನ್ನಾಗಿ ಮೂಡಿಬಂದಿದೆ. ಕೆ–ಪಾಪ್ ಪ್ರಪಂಚದ ಬಗ್ಗೆ ಕನ್ನಡದಲ್ಲಿ ನಾನು ಓದಿದ ಮೊದಲನೇ ಲೇಖನ ಇದು!

—ನಯನಾ ಜಿ.ಆರ್.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in